1318 (1360) ಶ್ರೀ ನಾಗರಾಜು, ಎಂ.ಟಿ.ಬಿ.(ಹೊಸಕೋಟೆ) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಕೋಟೆ ಟೌನ್ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರವು ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಪೂರ್ವ ಭಾವಿ ಸಿದ್ಧತೆಗಳೇನು;

ಇ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಿದ್ದಲ್ಲಿ ಇದಕ್ಕೆ ನಿಗದಿಪಡಿಸಿರುವ ಮೊತ್ತವೆಷ್ಟು;

ಈ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಆರ್.ಶ್ರೀನಿವಾಸ್ (ಪೌರಾಡಳಿತ ಸಚಿವರು) :

ಅ) ಹೌದು.

ಆ) ಹೊಸಕೋಟೆ ಪಟ್ಟಣದ ಒಳಚರಂಡಿ ಯೋಜನೆ ತಯಾರಿಸಲು ಸರ್ವೆ ಕೆಲಸ ಕೈಗೊಳ್ಳಬೇಕಾಗಿದ್ದು, ಇದಕ್ಕಾಗಿ ರೂ.7.20 ಲಕ್ಷಗಳ ಸರ್ವೆ ಅಂದಾಜನ್ನು ಮೇಲು ಸಹಿ ಹಾಗೂ ಮೊತ್ತ ಠೇವಣಿಕರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದಿ: 30–03–2007ರಲ್ಲಿ ಪ್ರಸ್ತಾವನೆಯನ್ನು ಪುರಸಭೆಯವರಿಗೆ ಕಳುಹಿಸಿದೆ. ಸರ್ವೆ ಮೊತ್ತವನ್ನು ಪುರಸಭೆಯವರು ಭರಿಸಿದ ನಂತರ ಸರ್ವೆ ಕೆಲಸ ಕೈಗೊಂಡು ಯೋಜನೆ ರೂಪಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

1319 (1656) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಎಂಆರ್‌ಡಿಎ ವತಿಯಿಂದ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿಯ ಜ್ಯೋತಿಪುರ ಗ್ರಾಮದ ಅಕ್ಕಪಕ್ಕ ಯಾವ ಸರ್ವೆ ನಂಬರುಗಳ ಮೂಲಕ ಹಾದು ಹೋಗಲು ಈ ಹಿಂದೆ ಸಮೀಕ್ಷೆ ನಡೆಸಲಾಗಿತ್ತು. (ಸರ್ವೆ ನಂ, ವಾರು ಮತ್ತು ವಿಸ್ತೀರ್ಣವಾರು ವಿವರ ಒದಗಿಸುವುದು);

ಆ) ಈ ಹಿಂದೆ ಗುರುತಿಸಿರುವ ಸರ್ವೆ ನಂಬರುಗಳನ್ನು ಬದಲಾವಣೆ ಮಾಡಿ ಬೇರೆ ಸರ್ವೆ ನಂಬರುಗಳ ಮೂಲಕ ಹಾದುಹೋಗಲು ಸಮೀಕ್ಷೆ ಕಾರ್ಯ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ಯಾವ ಸರ್ವೆ ನಂಬರ್‌ಗಳ ಮೂಲಕ ಹಾದು ಹೋಗುವ ಸಮೀಕ್ಷೆಯನ್ನು ಪುನಃ ಮಾಡಿದೆ, ಈ ರೀತಿ ಬದಲಾವಣೆ ಮಾಡಲು ಕಾರಣಗಳೇನು;

ಈ) ಬದಲಾವಣೆ ಮಾಡಿರುವುದರಿಂದ ಆಗಿರುವ ಅನುಕೂಲಗಳೇನು; ಹಾಗೂ ಬದಲಾವಣೆಯಿಂದ ಗ್ರಾಮದ ಕಲ್ಯಾಣ ಮತ್ತು ದೇವಸ್ಥಾನಗಳಿಗೆ ಧಕ್ಕೆಯಾಗುವುದಿಲ್ಲವೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಉಪನಗರಗಳ ವರ್ತುಲ ರಸ್ತೆ (STRR) ಮತ್ತು 7 ಪಟ್ಟಣಗಳ ವರ್ತುಲ ರಸ್ತೆ (TRR) ಸಂಪರ್ಕದ ರಸ್ತೆ ಜಾಲವನ್ನು ಯೋಜಿಸಲಾಗಿದೆ. ಇದರ ಅಂಗವಾಗಿ ಹೊಸಕೋಟೆ ಟೌನ್‌ಗೆ 28.00 ಕಿ.ಮೀ. ಉದ್ದದ ಹಾಗೂ 90.00 ಮೀ. ವಿಸ್ತೀರ್ಣದ 8 ಪಥಗಳ ವರ್ತುಲ ರಸ್ತೆಯನ್ನು ನಿರ್ಮಿಸಲು ಯೋಜಿಸಲಾಗಿದೆ.

ಉದ್ದೇಶಿತ ವರ್ತುಲ ರಸ್ತೆಯು ಬಿದರಹಳ್ಳಿ ಹೋಬಳಿಯ ಜ್ಯೋತಿಪುರ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್ ಮೂಲಕ ಹಾದುಹೋಗುವುದು.

ಕ್ರ. ಸಂ.	ಸರ್ವೆ ನಂಬರ್	ಅಗತ್ಯವಾದ ಅಂದಾಜು ವಿಸ್ತೀರ್ಣ (ಎಕರೆ–ಗುಂಟೆಗಳಲ್ಲಿ)
1	143	1–24
2	138	1–24
3	143	0–26
4	141/4	0–07
5	141/3	0–07
6	141/2	0–08
7	141/1	0–15

8	140	0–14
9	135	0–30
10	153	2–17
11	154	2–05
12	115	0–15
13	116	0–01
	ಒಟ್ಟು	**10–33**

ಆ) ಈ ಮೇಲ್ಕಂಡ ಸರ್ವೆ ನಂಬರುಗಳನ್ನು ಬದಲಾವಣೆ ಮಾಡಿ ಬೇರೆ ಸರ್ವೆ ನಂಬರುಗಳ ಮೂಲಕ ಹಾದು ಹೋಗಲು ಯಾವುದೇ ಸಮೀಕ್ಷೆಯನ್ನು ಮಾಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

1320 (525) ಶ್ರೀ ನರೇಂದ್ರ ಬಾಬು ಸಿ.ಎ.(ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲಘು ಮತ್ತು ಭಾರಿ ವಾಹನಗಳ ಸಂಖ್ಯೆ ಎಷ್ಟು? (ಚಕ್ರಾನುಸಾರವಾಗಿ ಮಾಹಿತಿ ಒದಗಿಸುವುದು);

ಆ) ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ 2004 ರಿಂದ 2007ರವರೆಗೆ ಅಪಘಾತದಿಂದ ಮೃತ ಪಟ್ಟವರ ಸಂಖ್ಯೆ ಎಷ್ಟು?

ಇ) ಈ ಅಪಘಾತಗಳಲ್ಲಿ ಕೆ.ಎಸ್.ಆರ್.ಟಿ.ಸಿ/ಬಿ.ಎಂ.ಟಿ.ಸಿ. ಅನುಪಾತವೆಷ್ಟು?

ಈ) ಕೆ.ಎಸ್.ಆರ್.ಟಿ.ಸಿ. ಬಸ್‌ಗಳಿಂದ ಪ್ರಯಾಣಿಸುವವರಿಗೆ ವಿಮೆ ಯೋಜನೆ ಅಡಿಯಲ್ಲಿ ಸಂಗ್ರಹವಾಗಿರುವ ಮೊತ್ತವೆಷ್ಟು?

ಉ) ಕೆ.ಎಸ್.ಆರ್.ಟಿ.ಸಿ. ಬಸ್‌ಗಳಿಂದ ಮೃತಪಟ್ಟ ಕುಟುಂಬದ ವ್ಯಕ್ತಿಗಳಿಗೆ ಇಲ್ಲಿಯವರೆಗೆ ಎಷ್ಟು ಹಣ ಸಂದಾಯ ಮಾಡಲಾಗಿದೆ? (ವಲಯವಾರು ವಿವರ ಒದಗಿಸುವುದು);

ಊ) ಈ ವಿಮಾ ಯೋಜನೆಯ ಫಲವನ್ನು ಪಡೆಯಲು ಮೃತಪಟ್ಟ ಕುಟುಂಬದವರು ಒದಗಿಸಬೇಕಾದ ದಾಖಲೆಗಳಾವುವು?